# ಕರ್ನಾಟಕ ಸರ್ಕಾರದ ನಡಾವಳಿ

**ವಿಷಯ:** ಮಾನ್ಯ ಉಚ್ಚ ನ್ಯಾಯಾಲಯವು WP No.892/2021 c/w WP No. 19674/2024ರ ಪಕರಣದಲ್ಲಿ ದಿನಾಂಕ: 18.08.2025ರಂದು ನೀಡಿರುವ ನಿರ್ದೇಶನಗಳನ್ನು ಅನುಷ್ಠಾನವನ್ನು ಮೇಲ್ವಿಚಾರಣೆ ನಡೆಸಲು ಉನ್ನತ ಮಟ್ಟದ ಸಮಿತಿ (High Level Committee) ರಚನೆಯ ಕುರಿತು.

**ಉಲ್ಲೇಖ:**
1. ರಿಟ್ ಅರ್ಜಿ ಸಂಖ್ಯೆ: 392/2021 ನ್ಯಾ/ಸಾ (c/w) ರಿಟ್ ಅರ್ಜಿ ಸಂಖ್ಯೆ: 19674/2024 ರ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ: 18.08.2025 ರ ಆದೇಶ.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ: ಮುಕಾ/11311769/2025, ದಿನಾಂಕ: 21.11.2025
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಡತ ಸಂಖ್ಯೆ: KFD/WP/RFO(MISC)/57/2025-WP.

**ಪ್ರಸ್ತಾವನೆ:**

ಮಾನ್ಯ ಉಚ್ಚ ನ್ಯಾಯಾಲಯವು WP No.392/2021 c/w WP No. 19674/2024ರ ಪಕರಣದಲ್ಲಿ ದಿನಾಂಕ: 18.08.2025ರಂದು ನೀಡಿರುವ ಆದೇಶದ ಪ್ಯಾರಾ 34ರಲ್ಲಿ, ಅರಣ್ಯ ಮತ್ತು ಭೂ ದಾಖಲಾತಿಗಳ ಗೊಂದಲ ಬಗೆಹರಿಸಲು ಸರ್ಕಾರವು ಹಂತ ಹಂತವಾಗಿ ಗಡಿಗಳ ಡಿಜಿಟಲ್ ನಕ್ಷೆ, ಕಡ್ಡಾಯ ಭೌಗೋಳಿಕ ಪರಿಶೀಲನೆ ಮತ್ತು ಗ್ರೀನ್ ವಾಚ್ ಪ್ಲಾಟ್‌ಫಾರಂ ಇತ್ಯಾದಿಗಳ ಕುರಿತು ಅನುಷ್ಠಾನವನ್ನು ಮೇಲ್ವಿಚಾರಣೆಗಾಗಿ High-Level Committee (HLC) ಸಮಿತಿಯನ್ನು ರಚಿಸಿ ಕ್ರಮ ಕೈಗೊಳ್ಳಬೇಕೆಂದು ನಿರ್ದೇಶಿಸಿರುತ್ತದೆ. ಮಾನ್ಯ ನ್ಯಾಯಾಲಯದ ಆದೇಶದ ಉದ್ಧೃತ ಭಾಗವು ಈ ಕೆಳಗಿನಂತಿದೆ:

*"**34.24. High-Level Committee:** To ensure these directions are not merely pronouncements but are effectively implemented, a robust monitoring mechanism is essential. A joint, high-level committee shall be convened, comprising representatives from the Chief Secretary's office, and the heads of the Land and Revenue, Forest, and Urban Development Departments, the Law Department, a law officer like an Additional Advocate General and such other departments that the Chief Secretary, in her wisdom, may decide. The HLC's mandate will be to oversee the phased implementation of these directions, resolve inter-departmental conflicts as they arise, and provide a quarterly compliance report to the court. Such a committee, with its multi-sectoral expertise, can bridge the gap between departments and prevent the " abdication of responsibilities" that has historically plagued environmental administration."*

ರಾಜ್ಯದಲ್ಲಿ ವಿವಿಧ ಸರ್ಕಾರಿ ಇಲಾಖೆಗಳಿಗೆ ಸಂಬಂಧಿಸಿದಂತೆ ಭೂ ಸ್ವಾಮ್ಯತೆ, ಭೂ ಹಸ್ತಾಂತರ, ಗಡಿ ತಿದ್ದುಪಡಿ ಪರಸ್ಪರ ಇಲಾಖೆಗಳ ಮಟ್ಟದಲ್ಲಿ ಉಂಟಾಗುತ್ತಿರುವ ವಿವಾದಗಳನ್ನು ತ್ವರಿತ, ಪಾರದರ್ಶಕ ಮತ್ತು ಕಾನೂನಾತ್ಮಕ ರೀತಿಯಲ್ಲಿ ನಿವಾರಿಸಲು ಮಾನ್ಯ ನ್ಯಾಯಾಲಯದ ಪ್ರಮುಖ ಉದ್ದೇಶವಾಗಿರುತ್ತದೆ.

ಮುಂದುವರೆದು, ದಿನಾಂಕ: 18.08.2025ರ ಆದೇಶದಲ್ಲಿ ಕಂದಾಯ ಇಲಾಖೆ, ಕಾನೂನು ಇಲಾಖೆ ಮುಂತಾದ ಇತರೆ ಇಲಾಖೆಗಳ ಮುಖ್ಯಸ್ಥರುಗಳನ್ನು ಒಳಗೊಂಡಂತೆ ಆಡಳಿತಾತ್ಮಕ ಹಾಗೂ ತಾಂತ್ರಿಕ ನಿರ್ದೇಶನಗಳನ್ನು ಅನುಷ್ಠಾನಗೊಳಿಸುವ ಕುರಿತು ಮೇಲ್ವಿಚಾರಣೆಗೆ ಹಾಗೂ ಅಂತರ್ ಇಲಾಖೆಗಳ ಗೊಂದಲಗಳನ್ನು ಬಗೆಹರಿಸಲು ಉನ್ನತ ಮಟ್ಟದ ಸಮಿತಿಯನ್ನು (High-Level Committee) ಯನ್ನು ರಚಿಸಲು ನಿರ್ದೇಶನ ನೀಡಿರುತ್ತದೆ.

ಆದ್ದರಿಂದ, ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ಅಧ್ಯಕ್ಷತೆಯಲ್ಲಿ ಭೂಮಿಯ ವಿಷಯವನ್ನು ನಿರ್ವಹಿಸುವ ಎಲ್ಲಾ ಇಲಾಖೆಗಳ ಹಾಗೂ ಭೂದಾಖಲೆಗಳ ದತ್ತಾಂಶ ಹಾಗೂ ಡಿಜಿಟಲೀಕರಣಗೊಳಿಸಲು ತಾಂತ್ರಿಕ ಪರಿಣತಿಗೊಂಡಿರುವ ಇಲಾಖಾ ತಜ್ಞರುಗಳನ್ನು ಒಳಗೊಂಡಿರುವ ಉನ್ನತ-ಮಟ್ಟದ ಸಮಿತಿ (High-Level Committee) ವನ್ನು ರಚಿಸುವ ಅವಶ್ಯಕತೆ ಇರುತ್ತದೆ.

ಅಲ್ಲದೇ, ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಮೇಲ್ಕಾಣಿಸಿದ ಆದೇಶದಲ್ಲಿನ ಕಂಡಿಕೆ 34.26 ರಲ್ಲಿ ಈ ಕೆಳಗಿನಂತೆ ನಿರ್ದೇಶನ ನೀಡಿರುತ್ತದೆ.
*34.26. Phase I (Immediate – 3 months): The IDLDRC and HLC are to be established. Mandatory data sharing protocols for all new land transactions must be put into place, ensuring no new contradictory records are created. These protocols would function like "data contracts," ensuring a common understanding and quality of data exchanged between departments. Block chain methodology could also be considered to be used.*

ಈ ನಿಟ್ಟಿನಲ್ಲಿ ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ: 22.12.2025 ಸಭೆಯಲ್ಲಿ ಉನ್ನತ-ಮಟ್ಟದ ಸಮಿತಿಯನ್ನು (High-Level Committee) ತುರ್ತಾಗಿ ರಚಿಸಲು ನಿರ್ಧರಿಸಲಾಗಿರುತ್ತದೆ.

ಅದರಂತೆ, ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: FEE/113/FAF/2025,**
**ಬೆಂಗಳೂರು, ದಿನಾಂಕ: 26.12.2025**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಭೂನಿರ್ವಹಣೆಗೆ ಸಂಬಂಧಿಸಿದ ಸರ್ಕಾರಿ ಇಲಾಖೆಗಳ ನಡುವೆ ಉದ್ಭವಿಸುವ ಭೂ ವಿವಾದಗಳನ್ನು ಪರಿಶೀಲಿಸಿ ಹಾಗೂ ಪರಿಹರಿಸಲು ಅನುವಾಗುವಂತೆ ಉನ್ನತ ಮಟ್ಟದ ಸಮಿತಿಯನ್ನು**(High Level Committee)** ಈ ಕೆಳಗಿನಂತೆ ರಚಿಸಿರುತ್ತದೆ

1. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ – **ಅಧ್ಯಕ್ಷರು**
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ – **ಸದಸ್ಯರು**
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ – **ಸದಸ್ಯರು**

4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ – **ಸದಸ್ಯರು**

5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ – **ಸದಸ್ಯರು**

6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿ.ಆ.ಸು ಇಲಾಖೆ (ಇ-ಆಡಳಿತ) – **ಸದಸ್ಯ ಕಾರ್ಯದರ್ಶಿ**

7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, (ವಿಪತ್ತು ನಿರ್ವಹಣೆ) - **ಸದಸ್ಯರು**

8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ( ಅರಣ್ಯ) ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ – **ಸದಸ್ಯರು**

9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ , - **ಸದಸ್ಯರು**

10. ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಗ್ರಾಮೀಣಾಭಿವೃದ್ಧಿ)- **ಸದಸ್ಯರು**

11. ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ - **ಸದಸ್ಯರು**

12. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಮೌಲ್ಯಮಾಪನ, ಕಾರ್ಯಯೋಜನೆ, ಸಂಶೋಧನೆ ಹಾಗೂ ಹವಾಮಾನ ಬದಲಾವಣೆ) – **ಸದಸ್ಯರು**

13. ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, – **ಸದಸ್ಯರು**

14. ಆಯುಕ್ತರು, ಪೌರಾಡಾಳಿತ ನಿರ್ದೇಶನಾಲಯ- **ಸದಸ್ಯರು**

15. ನೊಂದಣಿ ಮಹಾಪರೀಕ್ಷಕರು ಹಾಗೂ ಮುಂದ್ರಾಂಕಗಳ ಆಯುಕ್ತರು ನೊಂದಣಿ ಮತ್ತು ಮುದ್ರಾಂಕ ಇಲಾಖೆ, **ಸದಸ್ಯರು**

16. ನಿರ್ದೇಶಕರು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ- **ಸದಸ್ಯರು**

17. ಯೋಜನಾ ವ್ಯವಸ್ಥಾಪಕರು HRMS 2.0- **ಸದಸ್ಯರು**

ಈ ಸಮಿತಿಯ ಕರ್ತವ್ಯ ಹಾಗೂ ಕಾರ್ಯವಿಧಾನವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

**ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

ಬಿ. ಶಿ

**(ಬಿ. ಶಿವಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ,
(ಅರಣ್ಯ ಸಿ ಮತ್ತು ಸಮನ್ವಯ)

**ಇವರಿಗೆ:**

1. ಮಾನ್ಯ ಅಡ್ವೋಕೇಟ್ ಜನರಲ್, ಉಚ್ಚ ನ್ಯಾಯಾಲಯ ಕಟ್ಟಡ ಬೆಂಗಳೂರು.

2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕೊಠಡಿ ಸಂಖ್ಯೆ: 320, 3ನೇ ಮಹಡಿ ,ವಿಧಾನ ಸೌಧ ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.
4. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಅರಣ್ಯ ಪಡೆ ಮುಖ್ಯಸ್ಥರು) ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-03
5. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಮೌಲ್ಯ ಮಾಪನ, ಕಾರ್ಯಯೋಜನೆ, ಸಂಶೋಧನೆ, ತರಭೇತಿಹಾಗೂ ಹವಮಾನ ಬದಲಾವಣೆ) ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-03
6. ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ, ಕೆ. ಆರ್. ಸರ್ಕಲ್ ಬೆಂಗಳೂರು
7. ಆಯುಕ್ತರು, ಪೌರಾಡಾಳಿತ ನಿರ್ದೇಶನಾಲಯ, ಪೌರಾಡಳಿತ ನಿರ್ದೇಶನಾಲಯ ವಿಶ್ವೇಶ್ವರಯ್ಯ ಮುಖ್ಯ ಗೋಪುರ , ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು
8. ನಿರ್ದೇಶಕರು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ಕರ್ನಾಟಕ ಸರ್ಕಾರ ದೂರ ಸಂವೇದಿ ಭವನ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ, ಬೆಂಗಳೂರು - ೫೬೦ ೦೯೭
9. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ ಬೆಂಗಳೂರು-560 009
10. ಯೋಜನಾ ವ್ಯವಸ್ಥಾಪಕರು ಹೆಚ್.ಆರ್.ಎಂ.ಎಸ್ - 2.0 ಕೆಪಿಸಿಎಲ್ ಹಸಿರು ಕಟ್ಟಡ, 5ನೇ ಮಹಡಿ, ಪ್ಯಾಲೇಸ್ ರಸ್ತೆ, ಬೆಂಗಳೂರು - 560 001
11. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿ